# UGC : Varsities must implement quota rules

**NEW DELHI, DHNS:** Universities and colleges will now have to implement the government's reservation rules department wise or subject wise as they fill up vacant teaching positions across all levels.

The University Grants Commission (UGC) has notified its revised rules in this connection, stipulating for calculation of teaching positions for each of their departments separately to implement reservation rules for candidates belonging to the scheduled caste (SC) and scheduled tribe (ST) at the department level.

So far, the UGC rules provided for filling up of the vacant posts of the faculty members with implementation of reservation rules on the basis of the total number of posts sanctioned for a university or a college.

The change in rules comes about a year after the Allahabad High Court ordered for treating an institution's department as a unit for implementation of quota in the appointment of SC and ST candidates as faculty members, instead of the current norm of taking the institution as one unit for calculation of vacant positions. The Supreme Court also upheld the high court's verdict that came in April 2017.

The regulator directed all universities and colleges to implement the government's decision.

ವಿಜಯ ಕರ್ನಾಟಕ

■ **ವಿಕ ಸುದ್ದಿಲೋಕ** ಕೋಲಾರ

ಯುವ ವೈದ್ಯರು ತಮ್ಮ ವೃತ್ತಿಯ ಉದ್ದಕ್ಕೂ ನಿರಂತರವಾಗಿ ಕಲಿಯುತ್ತಿರಬೇಕು. ನಾನು ಎಲ್ಲಾವನ್ನೂ ಕಲಿತಿದ್ದೇನೆ ಎಂಬ ಭಾವನೆ ಇರಬಾರದು. ಉತ್ತಮ ಸೇವೆ ಸಲ್ಲಿಸಿದಾಗ ಐದು ವರ್ಷಗಳ ಕಾಲ ಪಡೆದಿರುವ ಪದವಿಗೆ ಅರ್ಥಬರುತ್ತದೆ ಎಂದು ಮಣಿಪಾಲ್ ಆಸ್ಪತ್ರೆಯ ಮೂತ್ರಪಿಂಡ ಶಾಸ್ತ್ರ ತಜ್ಞ ಡಾ.ಸಂಕರನ್ ಸುಂದರ್ ಅಭಿಪ್ರಾಯಪಟ್ಟರು.

ನಗರದ ದೇವರಾಜ ಅರಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಮಂಗಳವಾರ ನಡೆದ ಶೈಕ್ಷಣಿಕ ಪ್ರಶಸ್ತಿ ಹಾಗೂ ಪ್ರದಾನೋತ್ಸವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಮಾತನಾಡಿದರು.

ಯುವ ವೈದ್ಯರು ವೃತ್ತಿ ಜೀನದಲ್ಲಿ ಪ್ರಮಾಣಿಕತೆ, ಭದ್ದತೆ ತೋರಿದಾಗ ಸಮಾಜದಲ್ಲಿ ಗೌರವಗಳಿಸಲು ಸಾಧ್ಯ. ವೈದ್ಯರು, ರೋಗಿಗಳನ್ನು ತನ್ನ ಕುಟುಂಬದ ಸದಸ್ಯರಂತೆ ಭಾವಿಸಿ ಆರೈಕೆ ಮಾಡಬೇಕು. ಆರೋಗ್ಯದಲ್ಲಿ ಯಾವುದೇ ಸಂದರ್ಭದಲ್ಲಾದರೂ ಸಮಸ್ಯೆ ಎದುರಾದಾಗ ಮೊದಲು ಭೇಟಿಯಾಗುವುದು ವೈದ್ಯರನ್ನು, ತತ್ಸಾರ ಮನೋಭಾವ ತೋರದೆ ಚಿಕಿತ್ಸೆ ನೀಡಬೇಕು ಎಂದು ಸಲಹೆ ನೀಡಿದರು.

ವೈದ್ಯರು ತಮ್ಮ ವೃತ್ತಿ ಜೀವನದಲ್ಲಿ ವೈದ್ಯಕೀಯ ಕಾನೂನು ಪಾಲನೆ ಮಾಡಬೇಕು. ಕೆಲ ಸಂದರ್ಭದಲ್ಲಿ ಆಕಸ್ಮಿಕ ಸಂಭವಿಸುವ ಅನಾಹುತಗಳಿಂದ ತಪ್ಪಿಸಿಕೊಳ್ಳಲು ಕಾನೂನು ಸಹಕಾರಿಯಾಗುತ್ತದೆ. ಅದೇ ರೀತಿ ಅನಧಿಕೃತ ಚಟುವಟಿಕೆಗಳನ್ನು ನಡೆಸಿದಾಗ ಶಿಕ್ಷೆಗೆ ಒಳಗಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸಮಾಜದಲ್ಲಿ ಇತ್ತೀಚಿನ ದಿನಗಳಲ್ಲಿ ಭ್ರೂಣ ಹತ್ಯೆ ಮಾಡಿರುವ ಪ್ರಕರಣಗಳಲ್ಲಿ ಕೆಲ ವೈದ್ಯರು ಶಿಕ್ಷೆಗೆ ಗುರಿಯಾಗಿದ್ದಾರೆ. ಇಂತಹ ಅನಧಿಕೃತ ಚಟುವಟಕೆಗಳಿಂದ ದೂರು ಉಳಿದು, ಕಾನೂನು ರೀತಿ ಚಿಕಿತ್ಸೆ ನೀಡಿ ಎಂದರು.

ಇದೇ ಸಂದರ್ಭದಲ್ಲಿ ಅಂತಿಮ ಪದವಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ದೇವರಾಜ ಅರಸು ವೈದ್ಯಕೀಯ ಕಾಲೇಜಿನ ಉಪಕುಲಪತಿ ಡಾ. ರಘುವೀರ್, ಕುಲಾಧಿಪತಿ ಡಾ.ಎಸ್. ಕುಮಾರ್, ಕುಲ ಸಚಿವ ಡಾ.ಎ.ವಿ.ಎಂ. ಕುಟ್ಟಿ, ಪ್ರಾಂಶುಪಾಲ ಡಾ. ಹರೇಂದ್ರಕುಮಾರ್, ವೈದ್ಯಕೀಯ ಅಧೀಕ್ಷಕ ಡಾ.ಲಕ್ಷ್ಮಣ್ ಭಾಗವಹಿಸಿದ್ದರು.





ನಗರದ ದೇವರಾಜ ಅರಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಮಂಗಳವಾರ ನಡೆದ ಶೈಕ್ಷಣಿಕ ಪ್ರಶಸ್ತಿ ಹಾಗೂ ಪದಾನೋತ್ಸವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. (ಚಿತ್ರ2) ಸಮಾರಂಭದಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸಂಯುಕ್ತ ಕರ್ನಾಟಕ



# ವೈದ್ಯರಲ್ಲಿ ಮಾನವೀಯ ಮೌಲ್ಯ ಇರಲಿ

ಸಂ.ಕ ಸಮಾಚಾರ ಕೋಲಾರ

ವ್ಯಕ್ತಿ ಜೀವನದಲ್ಲಿ ಯಶಸ್ವಿಯಾಗಬೇಕಾದರೆ ಯಾವುದೇ ರೋಗಿಯನ್ನೂ ತಮ್ಮ ಸಂಬಂಧಿಕರಂತೆಯೇ ಭಾವಿಸಿ ಆರೈಕೆ ಮಾಡಬೇಕು ಎಂದು ಮಾತ್ರಪಿಂಡ ತಜ್ಞ ಡಾ.ಸಂಕರನ್ ಸುಂದರ್ ಸಲಹೆ ನೀಡಿದರು.

ಮಂಗಳವಾರ ದೇವರಾಜ ಅರಸು ವೈದ್ಯಕೀಯ ವಿ.ವಿಯಲ್ಲಿ ಶೈಕ್ಷಣಿಕ ಪ್ರಶಸ್ತಿ ಮತ್ತು ಪದವಿ ಪ್ರಧಾನ ಕಾರ್ಯಕ್ರಮದಲ್ಲಿ ಮಾತನಾಡಿ ಯುವ ವೈದ್ಯರು ಸದಾ ಅಧ್ಯಯನದ ಮೂಲಕ ಶೈಕ್ಷಣಿಕವಾಗಿ ಜ್ಞಾನ ಹೆಚ್ಚಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ರೋಗಿಗಳು ವೈದ್ಯರ ಕುರಿತು ಅತೀವ ವಿಶ್ವಾಸ ಇಟ್ಟುಕೊಂಡಿರುತ್ತಾರೆ. ಅದಕ್ಕೆ ಚ್ಯುತಿ ಬಾರದಂತೆ ಎಚ್ಚರಿಕೆ ವಹಿಸುವ ಜೊತೆಗೆ ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ನುಡಿದರು. ಅರಸು ವೈದ್ಯಕೀಯ ವಿ.ವಿ ಕುಲಪತಿ ಡಾ.ಎಸ್.ಕುಮಾರ್, ಉಪ ಕುಲಪತಿ ಸಿ.ವಿ.ರಘುವೀರ್, ರಿಜಿಸ್ಟ್ರಾರ್ ಜಾಲಪ್ಪ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ವಿ.ಲಕ್ಷ್ಮಯ್ಯ, ಎ.ವಿ.ಎಂ.ಕುಟ್ಟಿ, ಟ್ರಸ್ಟಿ ನಿರ್ದೇಶಕ ಜೆ.ರಾಜೇಂದ್ರ, ಡಾ.ಹರೇಂದ್ರಕುಮಾರ್ ಉಪಸ್ಥಿತರಿದ್ದರು.



ಅತ್ಯುತ್ತಮ ವಿದ್ಯಾರ್ಥಿನಿ ಪ್ರಶಸ್ತಿ ಪಡೆದ ಚಿಂತಾಮಣಿಯ ಮೋನಿಕ ತಂದೆ ನಾರಾಯಣಸ್ವಾಮಿ ಮತ್ತು ತಾಯಿ ಮಂಜುಳ ಅವರೊಂದಿಗೆ ಬಂಗಾರದ ಪದಕ ಸ್ವೀಕರಿಸಿದ ಸಂದರ್ಭ

## ಪದಕ ಕೊಳ್ಳೆ ಹೊಡೆದ ಮೋನಿಕ

ಚಿಂತಾಮಣಿಯ ಎನ್.ಮೋನಿಕ ಎಂಬಿಬಿಎಸ್‌ನಲ್ಲಿ 7 ಚಿನ್ನದ ಪದಕಗಳನ್ನು ತನ್ನದಾಗಿಸಿಕೊಳ್ಳುವ ಮೂಲಕ ಅವಿಭಜಿತ ಕೋಲಾರ ಜಿಲ್ಲೆಗೆ ಕೀರ್ತಿ ದೊರಕಿಸಿಕೊಟ್ಟಿದ್ದಾರೆ. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಗಣ್ಯರು ಮೋನಿಕಾ ಸಾಧನೆ ಶ್ಲಾಘಿಸಿ ಇತರ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಲೆಂದು ಹಾರೈಸಿದರು. ಮಾಳಪಲ್ಲಿಯ ಕೆಂಪಮ್ಮನವರ ಕುಟುಂಬದ ಎಂ.ನಾರಾಯಣಸ್ವಾಮಿ-ಮಂಜುಳ ದಂಪತಿಗಳ ಪುತ್ರಿ ಮೋನಿಕಾ ಬಾಲ್ಯದಿಂದಲೂ ಪ್ರತಿಭಾವಂತೆ. ಈಕೆ "ಬೆಸ್ಟ್ ಔಟ್‌ಗೋಯಿಂಗ್ ಸ್ಟೂಡೆಂಟ್" ಎಂಬ ಖ್ಯಾತಿಗೂ ಪಾತ್ರರಾಗಿದ್ದಾರೆ.



# ವೃತ್ತಿ ಬದ್ಧತೆ: ವೈದ್ಯರಿಗೆ ಗೌರವ

ಪ್ರಜಾವಾಣಿ ವಾರ್ತೆ



ಸಮಾರಂಭದಲ್ಲಿ ಮೂತ್ರಪಿಂಡ ತಜ್ಞ ಡಾ.ಸಂಕರನ್ ಸುಂದರ್ ವಿದ್ಯಾರ್ಥಿನಿ ಮೌನಿಕಾ ಅವರಿಗೆ ಚಿನ್ನದ ಪದಕ ಪ್ರದಾನ ಮಾಡಿದರು

ಕೋಲಾರ: 'ವೈದ್ಯರು ವೃತ್ತಿ ಜೀವನದಲ್ಲಿ ಪ್ರಾಮಾಣಿಕತೆ, ಬದ್ಧತೆ ತೋರಿದಾಗ ಮಾತ್ರ ಸಮಾಜದಲ್ಲಿ ಗೌರವ ಗಳಿಸಲು ಸಾಧ್ಯ' ಎಂದು ಮಣಿಪಾಲ್ ಆಸ್ಪತ್ರೆಯ ಮೂತ್ರಪಿಂಡ ತಜ್ಞ ಡಾ.ಸಂಕರನ್ ಸುಂದರ್ ಕಿವಿಮಾತು ಹೇಳಿದರು.

ನಗರದಲ್ಲಿ ಮಂಗಳವಾರ ನಡೆದ ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದ ಶೈಕ್ಷಣಿಕ ಪ್ರಶಸ್ತಿ ಮತ್ತು ಪದವಿ ಪ್ರದಾನ ಸಮಾರಂಭದಲ್ಲಿ ಮಾತನಾಡಿ, ವೈದ್ಯರಿಗೆ ಇತ್ತೀಚಿನ ದಿನಗಳಲ್ಲಿ ಹಣ ಸಂಪಾದನೆಯೇ ಮುಖ್ಯವಾಗಿದೆ. ವೈದ್ಯಕೀಯ ವೃತ್ತಿಯಲ್ಲಿ ಮಾನವೀಯ ಮೌಲ್ಯಗಳು ಮಾಯವಾಗಿವೆ ಎಂದು ವಿಷಾದಿಸಿದರು.

ವೈದ್ಯರು, ರೋಗಿಗಳನ್ನು ತಮ್ಮ ಕುಟುಂಬ ಸದಸ್ಯರಂತೆ ಭಾವಿಸಿ ವೈದ್ಯಕೀಯ ಸೇವೆ ನೀಡಬೇಕು. ಜನರಿಗೆ ಆರೋಗ್ಯ ಸಮಸ್ಯೆ ಎದುರಾದಾಗ ಮೊದಲು ವೈದ್ಯರನ್ನು ಭೇಟಿಯಾಗುತ್ತಾರೆ. ಹಣ ಸಂಪಾದನೆಗಿಂತ ಜೀವ ಮುಖ್ಯ. ಆದ್ದರಿಂದ ನಿರ್ಲಕ್ಷ್ಯ ತೋರದೆ ಚಿಕಿತ್ಸೆ ನೀಡಬೇಕು ಎಂದು ಸಲಹೆ ನೀಡಿದರು.

ಯುವ ವೈದ್ಯರು ವೃತ್ತಿ ಬದುಕಿನ ಉದ್ದಕ್ಕೂ ಅಧ್ಯಯನಶೀಲರಾಗಿರಬೇಕು. ಎಲ್ಲವನ್ನೂ ಕಲಿತಿದ್ದೇವೆ ಎಂಬ ಭಾವನೆ ಇರಬಾರದು. ಉತ್ತಮ ಸೇವೆ ಸಲ್ಲಿಸಿದಾಗ ವೈದ್ಯಕೀಯ ಪದವಿಗೆ ಅರ್ಥ ಬರುತ್ತದೆ. ಇತ್ತೀಚಿನ ದಿನಗಳಲ್ಲಿ ತಂತ್ರಜ್ಞಾನ ಬಹಳ ಮುಂದುವರಿದಿದೆ. ವೃತ್ತಿ ಬದುಕಿನಲ್ಲಿ ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಮತ್ತಷ್ಟು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

ಕಾನೂನು ಪಾಲಿಸಿ: ವೈದ್ಯರು ಕಾರ್ಯ ನಿರ್ವಹಣೆ ವೇಳೆ ವೈದ್ಯಕೀಯ ಕಾನೂನು ಪಾಲನೆ ಮಾಡಬೇಕು. ಕೆಲ ಸಂದರ್ಭದಲ್ಲಿ ಆಕಸ್ಮಿಕವಾಗಿ ಸಂಭವಿಸುವ ಅನಾಹುತಗಳಿಂದ ಪಾರಾಗಲು ಕಾನೂನು ಸಹಕಾರಿ. ಇತ್ತೀಚಿನ ದಿನಗಳಲ್ಲಿ ಭ್ರೂಣ ಹತ್ಯೆ ಪ್ರಕರಣಗಳಲ್ಲಿ ಕೆಲ ವೈದ್ಯರಿಗೆ ಶಿಕ್ಷೆಯಾಗಿದೆ. ಇಂತಹ ನಿಯಮಬಾಹಿರ ಚಟುವಟಿಕೆಗಳಿಂದ ದೂರವಿದ್ದು, ಕಾನೂನು ರೀತಿ ಚಿಕಿತ್ಸೆ ನೀಡಿ ಎಂದು ಹೇಳಿದರು.

1986ರಲ್ಲಿ ಮೊದಲ ಬಾರಿಗೆ ಅಂಗಕಸಿ ಚಿಕಿತ್ಸೆ ಮಾಡಿದಾಗ ಯಶಸ್ವಿಯಾಯಿತು. ಆ ನಂತರ ಅನೇಕ ಮಂದಿಗೆ ಅಂಗಕಸಿ ಚಿಕಿತ್ಸೆ ಮಾಡಿ ಹಲವು ವೈದ್ಯರಿಗೆ ತರಬೇತಿ ನೀಡಿದೆ ಎಂದು ವಿವರಿಸಿದರು.

ಎಂಬಿಬಿಎಸ್ ಅಂತಿಮ ವರ್ಷದ ವಿದ್ಯಾರ್ಥಿನಿ ಮೌನಿಕಾ ಚಿನ್ನದ ಪದಕ ಗಳಿಸಿದರು. ಪದವಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಕೇಂದ್ರದ ಕುಲಪತಿ ಡಾ.ಎಸ್.ಕುಮಾರ್, ಮಹಾವಿದ್ಯಾಲಯದ ಉಪ ಕುಲಪತಿ ಡಾ.ಸಿ.ವಿ.ರಘುವೀರ್, ಕುಲಸಚಿವ ಡಾ.ಎ.ವಿ.ಎಂ ಕುಟ್ಟಿ, ಪ್ರಾಂಶುಪಾಲ ಡಾ.ಹರೇಂದ್ರ ಕುಮಾರ್, ವೈದ್ಯಕೀಯ ಸೂಪರಿಂಟೆಂಡೆಂಟ್ ಡಾ.ಲಕ್ಷ್ಮಯ್ಯ ಭಾಗವಹಿಸಿದ್ದರು.



ಸಮಾರಂಭದಲ್ಲಿ ಪದವೀಧರರು ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

ಕೋಲಾರ ಪ್ರಭ



# ಯುವ ವೈದ್ಯರು ವೃತ್ತಿಯಲ್ಲಿ ಬದ್ಧತೆ ಬೆಳೆಸಿಕೊಳ್ಳಬೇಕು: ಡಾ. ಸಂಕರನ್ ಸುಂದರ್

• **ಕನ್ನಡಪ್ರಭ ವಾರ್ತೆ** ಕೋಲಾರ

ಯುವ ವೈದ್ಯರು ವೃತ್ತಿ ಜೀವನದಲ್ಲಿ ಪ್ರಮಾಣಿಕತೆ, ಬದ್ಧತೆ ತೋರಿದಾಗ ಸಮಾಜದಲ್ಲಿ ಗೌರವಗಳಿಸಲು ಸಾಧ್ಯ ಎಂದು ಮಣಿಪಾಲ್ ಆಸ್ಪತ್ರೆಯ ಮೂತ್ರಪಿಂಡ ಶಾಸ್ತ್ರ ತಜ್ಞ ಡಾ. ಸಂಕರನ್ ಸುಂದರ್ ಅಭಿಪ್ರಾಯಪಟ್ಟರು.

ನಗರದ ಶ್ರೀದೇವರಾಜ ಅರಸ್ ವೈದ್ಯಕೀಯಮಹಾವಿದ್ಯಾಲಯದಲ್ಲಿಮಂಗಳವಾರ ನಡೆದ ಶೈಕ್ಷಣಿಕ ಪ್ರಶಸ್ತಿ ಹಾಗೂ ಪದವಿ ಪ್ರದಾನಕಾರ್ಯಕ್ರಮದಲ್ಲಿವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಮಾತನಾಡಿದರು.

**ತಾತ್ಸಾರ ಮಾಡಬೇಡಿ:** ವೈದ್ಯರು ರೋಗಿಗಳನ್ನು ತನ್ನ ಕುಟುಂಬದ ಸದಸ್ಯರಂತೆ ಭಾವಿಸಿ ಹಾರೈಕೆ ಮಾಡಬೇಕು. ಆರೋಗ್ಯದಲ್ಲಿ ಯಾವುದೇ ಸಂದರ್ಭದಲ್ಲಾದರೂ ಸಮಸ್ಯೆ ಎದುರಾದಾಗ ಮೊದಲು ಭೇಟಿಯಾಗುವುದು ವೈದ್ಯರನ್ನು, ತತ್ಸಾರ ಮನೋಭಾವ ತೋರದೆ ಚಿಕಿತ್ಸೆ ನೀಡಬೇಕು. ಯುವ ವೈದ್ಯರು ತಮ್ಮ ವೃತ್ತಿಯ ಉದ್ದಕ್ಕೂ ನಿರಂತರವಾಗಿ ಕಲಿಯುತ್ತಿರಬೇಕು. ನಾನು ಎಲ್ಲಾವನ್ನೂ ಕಲಿತಿದ್ದೇನೆ ಎಂಬ ಭಾವನೆ ಇರಬಾರದು. ಉತ್ತಮ ಸೇವೆ ಸಲ್ಲಿಸಿದಾಗ ಐದು ವರ್ಷಗಳ ಕಾಲ ಪಡೆದಿರುವ ಪದವಿಗೆ ಅರ್ಥ ಬರುತ್ತದೆ ಎಂದು ತಿಳಿಸಿದರು.

**ಆಧುನಿಕ ತಂತ್ರಜ್ಞಾನದ ಅರಿವು ಅಗತ್ಯ:** ಇತ್ತೀಚಿನ ದಿನಗಳಲ್ಲಿ ತಂತ್ರಜ್ಞಾನ ಬಹಳ ಮುಂದುವರೆದಿದೆ. ಆಧುನಿಕ ತಂತ್ರಜ್ಞಾನ ಬಳಕೆಯಿಂದ ಸುಲಭ ರೀತಿಯಲ್ಲಿ ಶಸ್ತ್ರ ಚಿಕಿತ್ಸೆ ನೀಡಲಾಗುತ್ತಿದೆ. ಈ ಕುರಿತು ಅರಿವು ಪಡೆದುಕೊಳ್ಳಬೇಕಾದ ಅಗತ್ಯವಿದೆ.

ವೈದ್ಯರು ತಮ್ಮ ವೃತ್ತಿ ಜೀವನದಲ್ಲಿ ವೈದ್ಯಕೀಯ ಕಾನೂನು ಪಾಲನೆ ಮಾಡ ಬೇಕು. ಕೆಲ



ಶ್ರೀದೇವರಾಜ ಅರಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಮಂಗಳವಾರ ಶೈಕ್ಷಣಿಕ ಪ್ರಶಸ್ತಿ ಹಾಗೂ ಪದವಿ ಪ್ರದಾನ ಮಾಡಲಾಯಿತು.

ಸಂದರ್ಭದಲ್ಲಿ ಆಕಸ್ಮಿಕ ಸಂಭವಿಸುವ ಅನಾಹುತಗಳಿಂದ ತಪ್ಪಿಸಿ ಕೊಳ್ಳಲು ಕಾನೂನು ಸಹಕಾರಿಯಾಗುತ್ತದೆ. ಅದೇ ರೀತಿ ಅನಧಿಕೃತ ಚಟುವಟಿಕೆಗಳನ್ನು ನಡೆಸಿದಾಗ ಶಿಕ್ಷೆಗೆ ಒಳಗಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

**ಭ್ರೂಣಹತ್ಯೆ ಕಾನೂನುಬಾಹಿರ:** ಸಮಾಜದಲ್ಲಿ ಇತ್ತೀಚಿನ ದಿನಗಳಲ್ಲಿ ಭ್ರೂಣ ಹತ್ಯೆ ಮಾಡಿರುವ ಪ್ರಕರಣಗಳಲ್ಲಿ ಕೆಲ ವೈದ್ಯರು ಶಿಕ್ಷೆಗೆ ಗುರಿಯಾಗಿದ್ದಾರೆ. ಇಂತಹ ಅನಧಿಕೃತ ಚಟುವಟಿಕೆಗಳಿಂದ ದೂರು ಉಳಿದು, ಕಾನೂನು ರೀತಿ ಚಿಕಿತ್ಸೆ ನೀಡಿ. ಅಂಗಾಂಗ ಬದಲಾವಣೆ ಮಾಡುವ ಚಿಕಿತ್ಸೆಯನ್ನು 1986ರಲ್ಲಿ ಮೊದಲ ಭಾರಿ ಮಾಡಿದಾಗ ಯಶಸ್ವಿಯಾಯಿತು. ಅನಂತರ ಅನೇಕ ಮಂದಿಗೆ ಚಿಕಿತ್ಸೆ ನೀಡಿ ಇತರರಿಗೂ ತರಬೇತಿ ನೀಡಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಅಂತಿಮ ಪದವಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ದೇವರಾಜ ಅರಸು ವೈದ್ಯಕೀಯ ಕಾಲೇಜಿನ ಉಪಕುಲಪತಿ ಡಾ.ರಘುವೀರ್, ಕುಲಾಧಿಪತಿ ಡಾ.ಎಸ್.ಕುಮಾರ್, ಕುಲ ಸಚಿವ ಡಾ.ಎ.ವಿ.ಎಂ.ಕುಟ್ಟಿ, ಪ್ರಾಂಶುಪಾಲ ಡಾ.ಹರೇಂದ್ರಕುಮಾರ್, ವೈದ್ಯಕೀಯ ಅಧೀಕ್ಷಕ ಡಾ.ಲಕ್ಷ್ಮಣ್ ಭಾಗವಹಿಸಿದ್ದರು.

ಕೋಲಾರ ಪ್ರಭ



# ವೈದ್ಯರು ಉತ್ತಮ ಸೇವೆ ಸಲ್ಲಿಸಿದಾಗ ಪದವಿಗೆ ವೈದ್ಯ ಪದವಿಗೆ ಅರ್ಥಬರುತ್ತದೆ: ಡಾ.ಸಂಕರನ್‌ಸುಂದರ್



ಕೋಲಾರ.ಮಾ.6– ಯುವ ವೈದ್ಯರು ತಮ್ಮ ವೃತ್ತಿಯ ಉದ್ದಕ್ಕೂ ನಿರಂತರವಾಗಿ ಕಲಿಯುತ್ತಿರಬೇಕು. ನಾನು ಎಲ್ಲಾವನ್ನೂ ಕಲಿತಿದ್ದೇನೆ ಎಂಬ ಭಾವನೆ ಇರಬಾರದು. ಉತ್ತಮ ಸೇವೆ ಸಲ್ಲಿಸಿದಾಗ ಐದು ವರ್ಷಗಳ ಕಾಲ ಪಡೆದಿರುವ ಪದ ವಿಗೆ ಅರ್ಥಬರುತ್ತದೆ ಎಂದು ಮಣಿಪಾಲ್ ಆಸ್ಪತ್ರೆಯ ಮೂತ್ರ ಪಿಂಡ ಶಾಸ್ತ್ರ ತಜ್ಞ ಡಾ.ಸಂಕರನ್ ಸುಂದರ್ ಅಭಿಪ್ರಾಯಪಟ್ಟರು.

ನಗರದ ದೇವರಾಜ ಅರಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಮಂಗಳವಾರ ನಡೆದ ಶೈಕ್ಷಣಿಕ ಪ್ರಶಸ್ತಿ ಹಾಗೂ ಪದಾನೋತ್ಸವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಮಾತನಾಡಿದರು.

ಯುವ ವೈದ್ಯರು ವೃತ್ತಿ ಜೀನದಲ್ಲಿ ಪ್ರಮಾಣಿಕತೆ, ಭದ್ಧತೆ ತೋರಿದಾಗ ಸಮಾಜದಲ್ಲಿ ಗೌರವ ಗಳಿಸಲು ಸಾಧ್ಯ.

ವೈದ್ಯರು, ರೋಗಿಗಳನ್ನು ತನ್ನ ಕುಟುಂಬದ ಸದಸ್ಯರಂತೆ ಭಾವಿಸಿ ಶುಶ್ರೂಷೆ ಮಾಡಬೇಕು. ಆರೋಗ್ಯ ದಲ್ಲಿ ಯಾವುದೇ ಸಂದರ್ಭದಲಾ ್ಲದರೂ ಸಮಸ್ಯೆ ಎದುರಾದಾಗ ಮೊದಲು ಭೇಟಿಯಾಗುವುದು ವೈದ್ಯರನ್ನು, ತತ್ಸಾರ ಮನೋಭಾವ ತೋರದೆ ಚಿಕಿತ್ಸೆ ನೀಡಬೇಕು ಎಂದು ಸಲಹೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ತಂತ್ರ ಜ್ಞಾನ ಬಹಳು ಮುಂದುವರೆದಿದೆ. ಆಧುನಿಕ ತಂತ್ರಜ್ಞಾನ ಬಳಕೆಯಿಂದ ಸುಲಭ ರೀತಿಯಲ್ಲಿ ಶಸ್ತ್ರ ಚಿಕಿತ್ಸೆ ನೀಡಲಾಗುತ್ತಿದೆ. ಈ ಕುರಿತು ಅರಿವು ಪಡೆದುಕೊಳ್ಳಬೇಕಾದ ಅಗತ್ಯವಿದೆ ಎಂದು ಹೇಳಿದರು.

ವೈದ್ಯರು ತಮ್ಮ ವೃತ್ತಿ ಜೀವ ನದಲ್ಲಿ ವೈದ್ಯಕೀಯ ಕಾನೂನು ಪಾಲನೆ ಮಾಡಬೇಕು. ಕೆಲ ಸಂದರ್ಭದಲ್ಲಿ ಆಕಸ್ಮಿಕ ಸಂಭವಿಸುವ ಅನಾಹುತಗಳಿಂದ ತಪ್ಪಿಸಿ ಕೊಳ್ಳಲು ಕಾನೂನು ಸಹಕಾರಿಯಾಗುತ್ತದೆ. ಅದೇ ರೀತಿ ಅನಧಿಕೃತ ಚಟುವಟಿಕೆಗಳನ್ನು ನಡೆಸಿದಾಗ ಶಿಕ್ಷೆಗೆ ಒಳಗಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

# ವೈದ್ಯರು ಉತ್ತಮ ಸೇವೆ ಸಲ್ಲಿಸಿದಾಗ ಪದವಿಗೆ ವೈದ್ಯ ಪದವಿಗೆ ಅರ್ಥಬರುತ್ತದೆ: ಡಾ.ಸಂಕರನ್‌ಸುಂದರ್

1ನೇ ಪುಟದಿಂದ...

ಸಮಾಜದಲ್ಲಿ ಇತ್ತೀಚಿನ ದಿನಗಳಲ್ಲಿ ಭ್ರೂಣ ಹತ್ಯೆ ಮಾಡಿರುವ ಪ್ರಕರಣಗಳಲ್ಲಿ ಕೆಲ ವೈದ್ಯರು ಶಿಕ್ಷೆಗೆ ಗುರಿಯಾಗಿದ್ದಾರೆ. ಇಂತಹ ಅನಧಿಕೃತ ಚಟುವಟಿಕೆಗಳಿಂದ ದೂರು ಉಳಿದು, ಕಾನೂನು ರೀತಿ ಚಿಕಿತ್ಸೆ ನೀಡಿ ಎಂದರು.

ಅಂಗಕಸಿ ಬದಲಾವಣೆ ಮಾಡುವ ಚಿಕಿತ್ಸೆಯನ್ನು 1986ರಲ್ಲಿ ಮೊದಲ ಭಾರಿ ಮಾಡಿದಾಗ ಯಶಸ್ವಿಯಾಯಿತು. ಆನಂತರ ಅನೇಕ ಮಂದಿಗೆ ಚಿಕಿತ್ಸೆ ನೀಡಿ ಇತರರಿಗೂ ತರಬೇತಿ ನೀಡಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಅಂತಿಮ ಪದವಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ದೇವರಾಜ ಅರಸು ವೈದ್ಯ ಕೀಯ ಕಾಲೇಜಿನ ಉಪಕುಲಪತಿ ಡಾ.ರಘುವೀರ್, ಕುಲಾಧಿಪತಿ ಡಾ.ಎಸ್.ಕುಮಾರ್, ಕುಲ ಸಚಿವ ಡಾ.ಎ.ವಿ.ಎಂ.ಕುಟ್ಟಿ, ಪ್ರಾಂಶುಪಾಲ ಡಾ.ಹರೇಂದ್ರಕುಮಾರ್, ವೈದ್ಯ ಕೀಯ ಅಧೀಕ್ಷಕ ಡಾ. ಲಕ್ಷ್ಮಣ್ ಭಾಗವಹಿಸಿದ್ದರು.

ವಾಣಿ



# ವೈದ್ಯರು ಕಾನೂನು ಬಾಹಿರ ಚಟುವಟಿಕೆಯಲ್ಲಿ ತೊಡಗಬಾರದು: ಡಾ.ಸಂಕರನ್ ಸುಂದರ್

ಕೋಲಾರ

ಯುವ ವೈದ್ಯರು ಜೀವನದಲ್ಲಿ ಯಶಸ್ವಿಯಾಗಲು ರೋಗಿಗಳನ್ನು ಸಂಬಂಧಿಕರಂತೆ ಪ್ರೀತಿಯಿಂದ ಕಾಣಬೇಕು ಎಂದು ಮಾತ್ರಪಿಂಡ ತಜ್ಞ ಡಾ. ಸಂಕರನ್ ಸುಂದರ್ ಹೇಳಿದರು.


ಇಲ್ಲಿನ ಹೊರ ವಲಯದ ದೇವರಾಜ್ ಅರಸ್ ವೈದ್ಯಕೀಯ ಮಹಾವಿದ್ಯಾಲಯದ ರಜತ ಮಹೋತ್ಸವ ಸಭಾಂಗಣದಲ್ಲಿ ನಡೆದ ಶೈಕ್ಷಣಿಕ ಪ್ರಶಸ್ತಿ ಮತ್ತು ಪದವಿ ಪ್ರದಾನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಯುವ ವೈದ್ಯರು ಶೈಕ್ಷಣಿಕ ಜ್ಞಾನ ಪಡೆಯುವ ಜತೆಯಲ್ಲಿ ರೋಗಿಗಳಿಗೆ ಉತ್ತಮ ರೀತಿಯಲ್ಲಿ ಆರೈಕೆಯ ಚಿಕಿತ್ಸೆ ಮಾಡುವ ನಿಟ್ಟಿನಲ್ಲಿ ಕುಟುಂಬ ಸದಸ್ಯರಲ್ಲಿ ಒಬ್ಬರಂತೆ ನೋಡಬೇಕು ಎಂದು ಮನವಿ ಮಾಡಿದರು.

ಯುವ ವೈದ್ಯರು ನಂಬಿಕೆಗೆ ಯಾವುದೇ ಚುತ್ತಿ ಬಾರದಂತೆ ಕ್ರಮವಹಿಸಿ ವೈದ್ಯಕೀಯ ಕ್ಷೇತ್ರದ ಮಾನವೀಯ ಮೌಲ್ಯವನ್ನು ಜೀವನದಲ್ಲಿ ಅಳವಡಿಸಿಕೊಂಡು ಪ್ರಮುಖ ಪಾತ್ರವಹಿಸಬೇಕು. ಯಾವುದೇ ಕಾರಣಕ್ಕೂ ವೈದ್ಯರು ಹಾಗೂ ಯುವ ವೈದ್ಯರು ಕಾನೂನು ಬಾಹಿರ ಚಟುವಟಿಯಲ್ಲಿ ತೊಡಗಗದೆ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಬೇಕು ಎಂದರು. ದೇವರಾಜ್ ಆರಸು ವೈದ್ಯಕೀಯ ಕಾಲೇಜಿನ ಕುಲಪತಿ ಡಾ.ಎಸ್.ಕುಮಾರ್, ಉಪ ಕುಲಪತಿ ಸಿ.ವಿ.ರಾಘುವೀರ್, ರಿಜಿಸ್ಟಾರ್ ಎ.ವಿ.ಎಂ.ಕುಟ್ಟಿ, ಟ್ರಸ್ಟಿ ಹಾಗೂ ನಿರ್ದೇಶಕ ಜೆ.ರಾಜೇಂದ್ರ, ವೈದ್ಯಕೀಯ ಸೂಪರ್‌ದೆಂಟ್ ವಿ,ಲಕ್ಷ್ಮಯ್ಯ, ಪ್ರಿನ್ಸಿಪಾಲ್ ಡಟಾ. ಎಂ.ಎಲ್. ಹೇರೆಂದ್ರ ಕುಮಾರ್, ಉಪ ಪ್ರಾಂಶುಪಾಲ ಡಾ.ಎ.ಭಾಸ್ಕರಾನ್ ಇದ್ದರು.

ಕೋಲಾರಪತ್ರಿಕೆ



# ರೋಗಿಗಳನ್ನು ಪ್ರೀತಿಯಿಂದ ಕಾಣುವಾತ ಯಶಸ್ವೀ ವೈದ್ಯ: ಶಂಕರನ್ ಸುಂದರ್



ಕೋಲಾರ ಮಾ ೬

ವೈದ್ಯಕೀಯ ವೃತ್ತಿಗೆ ಕಾಲಿಡುತ್ತಿರುವ ಯುವ ವೈದ್ಯ ಪದವೀಧರರು ತಮ್ಮ ವೃತ್ತಿ ಜೀವನದಲ್ಲಿ ಯಶಸ್ವಿಯಾಗಲು ರೋಗಿಗಳನ್ನು ತಮ್ಮ ಆತ್ಮೀಯ ಸಂಬಂಧಿಕರಂತೆ ಪ್ರೀತಿಯಿಂದ ಕಾಣುವುದನ್ನು ಮೈಗೂಡಿಸಿಕೊಳ್ಳಬೇಕು ಎಂದು ಮೂತ್ರಪಿಂಡ ತಜ್ಞ ಡಾ॥ ಶಂಕರನ್ ಸುಂದರ್ ಸಲಹೆ ನೀಡಿದರು.

ನಗರದ ಹೊರ ವಲಯದ ಟಮಕದ ದೇವರಾಜಅರಸ್ ವೈದ್ಯಕೀಯ ಮಹಾವಿದ್ಯಾಲಯದ ರಜತ ಮಹೋತ್ಸವ ಸಭಾಂಗಣದಲ್ಲಿ ನಡೆದ ಶೈಕ್ಷಣಿಕ ಪ್ರಶಸ್ತಿ ಮತ್ತು ಪದವಿ ಪ್ರದಾನೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಯುವ ವೈದ್ಯರು ಶೈಕ್ಷಣಿಕ ಜ್ಞಾನವನ್ನು ಪಡೆಯುವುದರ ಜೊತೆಜೊತೆಯಲ್ಲಿಯೇ ತಮ್ಮ ಬಳಿಗೆ ಬರುವ ರೋಗಿಗಳಿಗೆ ಉತ್ತಮ ರೀತಿಯಲ್ಲಿ ಆರೈಕೆಯ ಚಿಕಿತ್ಸೆ ನೀಡುವ ನಿಟ್ಟಿನಲ್ಲಿ ತಮ್ಮ ಕುಟುಂಬ ಸದಸ್ಯರಲ್ಲಿ ಒಬ್ಬರಂತೆ ನೋಡಬೇಕು ಎಂದು ನುಡಿದರು.

ಯುವ ವೈದ್ಯರ ಮೇಲೆ ಸಮಾಜ ಹೊಂದುವ ನಂಬಿಕೆಗೆ

ಯುವ ವೈದ್ಯರ ಮೇಲೆ ಸಮಾಜ ಹೊಂದುವ ನಂಬಿಕೆಗೆ

ಧಕ್ಕೆ ಬಾರದ ರೀತಿಯಲ್ಲಿ ಅವರು ಕರ್ತವ್ಯ ನಿರ್ವಹಿಸಬೇಕು. ವೈದ್ಯಕೀಯ ಕ್ಷೇತ್ರದ ಹಿರಿಮೆಯನ್ನು ಹೆಚ್ಚಿಸುವ ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಶಂಕರನ್ ಸುಂದರ್ ಆಶಯ ವ್ಯಕ್ತಪಡಿಸಿದರು

ಯಾವುದೇ ಕಾರಣಕ್ಕೂ ವೈದ್ಯರು ಅದರಲ್ಲಿಯೂ ಯುವ ವೈದ್ಯರು ಕಾನೂನು ಬಾಹಿರವಾದ ಚಟುವಟಿಕೆಗಳಲ್ಲಿ ತೊಡಗುವತ್ತ ಮನಸ್ಸು ನೀಡಬಾರದೆಂದು ತಿಳಿಸಿದರು.



ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಕುಲಪತಿ ಡಾ॥ ಎಸ್.ಕುಮಾರ್, ಉಪ ಕುಲಪತಿ ಪ್ರೊ॥ ಸಿ.ವಿ. ರಘುವೀರ್, ರಿಜಿಸ್ಟಾರ್ ಎ.ವಿ.ಎಂ.ಕುಟ್ಟಿ, ಟ್ರಸ್ಟಿ ಹಾಗೂ ನಿರ್ದೇಶಕ ಜೆ. ರಾಜೇಂದ್ರ, ವೈದ್ಯಕೀಯ ಅಧೀಕ್ಷಕ ಡಾ॥ ವಿ,ಲಕ್ಷ್ಮಯ್ಯ, ದೇವರಾಜ ಅರಸು ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ॥ ಎಂ.ಎಲ್. ಹರೇಂದ್ರಕುಮಾರ್, ಉಪ ಪ್ರಾಂಶುಪಾಲ ಡಾ॥ ಎ. ಭಾಸ್ಕರನ್ ಮತ್ತಿತರರಿದ್ದರು.

ಬಹುಮುಖ ಪ್ರತಿಭಾವಂತೆ ಮೋನಿಕಾ ಅವರಿಗೆ ಬಂಗಾರದ ಪದಕವನ್ನು ಪ್ರದಾನ ಮಾಡಲಾಯಿತು.